ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ ಹಾಗೂ ವಿಷಯದ ಬಗ್ಗೆ ಸೂಕ್ತ ಅಧ್ಯಯನ ನಡೆಸಿ ತೀರ್ಮಾನಿಸಲಾಗುವುದು.

ಬಂಟ್ವಾಳ ತಾಲ್ಲೂಕಿನ (ಎಸ್.ಇ.ಝೆಡ್), ವಿಶೇಷ ಆರ್ಥಿಕ ವಲಯ

18(21) ಶ್ರೀ ಖಾದರ್ ಯು ಟಿ:(ಮಂಗಳೂರು) ಮಾನ್ಯ ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ವಿಶೇಷ ಆರ್ಥಿಕ ವಲಯ (ಎಸ್.ಇ.ಝೆಡ್) ದಲ್ಲಿ ಎಷ್ಟು ಕಂಪನಿಗಳಿಗೆ ಸ್ಥಳವನ್ನು ನೀಡಲಾಗಿದೆ. ಈ ಯೋಜನೆಯಲ್ಲಿ ಎಷ್ಟು ಕಂಪನಿಗಳು ಸ್ಥಳಾವಕಾಶವನ್ನು ಕೋರಿ ಅರ್ಜಿ ಸಲ್ಲಿಸಿವೆ.

ಆ) ಮಂಜೂರಾತಿ ಪಡೆದ ಕಂಪನಿಗಳೂ ಯಾವುವು, ಸದರಿ ಕಂಪನಿಗಳು ಯಾವ ಯಾವ ಉದ್ದೇಶಕ್ಕಾಗಿ ಅರ್ಜಿ ಸಲ್ಲಿಸಿದ್ದವು, ಕಂಪನಿವಾರು ಎಷ್ಟು ಉದ್ಯೋಗವನ್ನು ಕಲ್ಪಿಸಲಾಗಿದೆ.

ಇ) ಕಾರ್ಯಾರಂಭ ಮಾಡದೆ ಇರುವ ಕಂಪನಿಗಳು ಯಾವುವು, ಯಾವ ಕಾರಣಗಳಿಂದಾಗಿ ಕಾರ್ಯರಂಭ ಮಾಡಿರುವುದಿಲ್ಲ (ವಿವರ ನೀಡುವುದು).

ಶ್ರೀ ಮುರುಗೇಶ್ ಆರ್ ನಿರಾಣಿ(ಮಧ್ಯಮ ಕೈಗಾರಿಕಾ ಸಚಿವರು):

ಅ) ಬಂಟ್ವಾಳ ತಾಲ್ಲೂಕಿನಲ್ಲಿ 3 ವಿಶೇಷ ಆರ್ಥಿಕ ವಲಯಗಳು ಸ್ಥಾಪನೆಯಾಗುತ್ತವೆ. ಅವುಗಳ ವಿವರ ಕೆಳಕಂಡಂತಿರುತ್ತವೆ.

ಎಸ್ಇಝೆಡ್ ಹೆಸರು	ವಲಯ	ಭೂಮಿ ವಿವರ
ಬಿಎ ಟೆಕ್ ಪಾರ್ಕ್ ಪ್ರೈ. ಲಿ.	ಐಟಿ/ಐಟಿಇಎಸ್	ಸ್ವಂತ ಭೂಮಿ
ಇನ್ಫೋಸಿಸ್ಸ್ ಟೆಕ್ನಾಲಜಿಸ್ ಲಿ.	ಐಟಿ/ಐಟಿಇಎಸ್	ಕೆಐಎಡಿಬಿ ಹಂಚಿಕೆ
ಕೆಐಎಡಿಬಿ	ಐಟಿ/ಐಟಿಎಎಸ್	ಕೆಐಎಡಿಬಿ ಭೂಮಿ

ಇನ್ಫೋಸಿಸ್ಸ್ ಟೆಕ್ನಾಲಜಿಸ್ ಲಿ.ನ ಎಸ್ಇಝೆಡ್ ನಲ್ಲಿ ತನ್ನದೆ ಆದ ಒಂದು ಘಟಕವನ್ನು ಸ್ಥಾಪನೆ ಮಾಡಿರುತ್ತದೆ. ಕೆಐಎಡಿಬಿ ಎಸ್ಇಝೆಡ್‌ನಲ್ಲಿ 10 ಘಟಕಗಳಿಗೆ ಜಮೀನನ್ನು ಹಂಚಿಕೆ ಮಾಡಲಾಗಿದೆ.

ಬಿಎ ಟೆಕ್ ಪಾರ್ಕ್‌ನ ಎಸ್‌ಇಝಡ್‌ನಲ್ಲಿ ಇನ್ನು ಯಾವುದೇ ಘಟಕಗಳು ಭೂಮಿ ಪಡೆದಿರುವುದಿಲ್ಲ.

ಆ) ಇನ್‌ಫೋಸಿಸ್ಟ್ ಟೆಕ್ನಾಲಜಿಸ್ ಲಿ.ನ ಎಸ್‌ಇಝಡ್ ನಲ್ಲಿ ತನ್ನದೆ ಆದ ಒಂದು ಘಟಕವು ಪ್ರಾರಂಭ ಮಾಡಿದ್ದು ಅದರಲ್ಲಿ 2236 ಜನರಿಗೆ ಉದ್ಯೋಗವನ್ನು ನೀಡಲಾಗಿದೆ ಮತ್ತು ರೂ. 217.00 ಕೋಟಿಗಳ ಬಂಡವಾಳ ಹೂಡಲಾಗಿದೆ.

ಬಿಎ ಟೆಕ್‌ಪಾರ್ಕ್ ಎಸ್‌ಇಝಡ್‌ನಲ್ಲಿ ಇನ್ನು ಯಾವುದೇ ಉದ್ಯೋಗ ಸೃಷ್ಟಿಯಾಗಿರುವುದಿಲ್ಲ. ಇದು ಅನುಷ್ಠಾನಗೊಂಡರೆ ಸುಮಾರು 3000 ಜನರಿಗೆ ಉದ್ಯೋಗವಾಕಾಶ ಸಿಗುವ ನಿರೀಕ್ಷೆ ಇದೆ.

ಕೆಐಎಡಿಬಿ ಎಸ್‌ಇಝಡ್‌ನಲ್ಲಿ ಐಟಿ/ಐಟಿಇಎಸ್ ಚಟುವಟಿಕೆಗಾಗಿ ಭೂಮಿ ಪಡೆದ 10 ಘಟಕಗಳ ವಿವರಗಳು ಕೆಳಕಂಡಂತಿರುತ್ತವೆ.

- ಧ್ರುವದೇಶ್ ಹೋಲ್ಡಿಂಗ್ಸ್ ಆಂಡ್ ರಿಯಾಲಿಟಿ ಪ್ರೈ.ಲಿ.
- ನ್ಯೂಮಾಂಜೀನ್ ಟೆಕ್ನಾಲಜೀಸ್ ಪ್ರೈ.ಲಿ.
- ಚಾಂಟಲಿ ಗ್ರೂಪ್
- ವಿಪ್ರೋ ಲಿಮಿಟೆಡ್
- ಲೀಲಾಲೇಸ್ ಹೋಲ್ಟಿಂಗ್ಸ್ ಪ್ರೈ.ಲಿ.
- ಗೋಪಾಲನ್ ಎಂಟರ್‌ಪ್ರೈಸಸ್
- ಪಿನಾಕಲ್ ಎಂಟರ್‌ಪ್ರೈಸಸ್
- ಎಲೈಟ್ ಡೆವಲಪರ್ಸ್
- ಟೆಕ್ನೋಪೋರ್ಟ್ ಹೋಲ್ಟಿಂಗ್ಸ್ ಅಂಡ್ ಸರ್ವೀಸಸ್ ಪ್ರೈ.ಲಿ.
- ಎನ್.ಎಲ್.ಡಿ. ಡೆವಲಪರ್ಸ್

ಮೇಲ್ಕಂಡ ಘಟಕಗಳಿಂದ ಸುಮಾರು 38,346 ಜನರಿಗೆ ಕೆಐಎಡಿಬಿ ಎಸ್‌ಇಝಡ್‌ನಲ್ಲಿ ಉದ್ಯೋಗ ಸಿಗುವ ನಿರೀಕ್ಷೆ ಇದೆ.

ಇ) ಕೆಐಎಡಿಬಿ ಇಂದ ನೀಡಿರುವ ಭೂಮಿಯಲ್ಲಿ ಮೆ: ಇನ್‌ಫೋಸಿಸ್ ಟೆಕ್ನಾಲಜೀಸ್ ಸಂಸ್ಥೆಯು ಈಗಾಗಲೇ ಕಾರ್ಯಾರಂಭ ಮಾಡಿರುತ್ತದೆ.

ಕೆಐಎಡಿಬಿ ಐಟಿ/ಐಟಿಇಎಸ್ ಎಸ್‌ಇಝೆಡ್‌ನಲ್ಲಿ ಯಾವುದೇ ಘಟಕಗಳು ಕಾರ್ಯಾರಂಭ ಮಾಡಿರುವುದಿಲ್ಲ. ಮೂಲಭೂತ ಸೌಕರ್ಯಗಳಾದ ನೀರು ಹಾಗೂ ವಿದ್ಯುತ್ ಸರಬರಾಜು ಕಾಮಗಾರಿಗಳು ಪ್ರಗತಿಯಲ್ಲಿದ್ದು ಪೂರ್ಣಗೊಂಡಿಲ್ಲದ ಕಾರಣ ಘಟಕಗಳು ಕಾರ್ಯಾರಂಭ ಮಾಡಿರುವುದಿಲ್ಲ. ಪಟ್ಟಿಯನ್ನು 'ಆ' ದಲ್ಲಿ ಕೊಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರೀ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳು

19(22) ಶ್ರೀ ಖಾದರ್ ಯು ಟಿ:(ಮಂಗಳೂರು) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಜಲ ಸಂಪನ್ಮೂಲ ಇಲಾಖೆಯಿಂದ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣವನ್ನು ಸರ್ಕಾರವು ವೆಚ್ಚ ಮಾಡುವುದು (ವಿವರ ನೀಡುವುದು);

ಆ) ಈ ಯೋಜನೆಗಳಿಂದ ರೈತರ ಎಷ್ಟು ಎಕರೆ ಪ್ರದೇಶವು ನೀರಾವರಿಗೆ ಒಳಪಡುತ್ತದೆ (ಕ್ಷೇತ್ರವಾರು ವಿವರ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು):

ಅ) ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಸಣ್ಣ ಕೈಗಾರಿಕಾ ಉತ್ಪಾದನಾ ವಸ್ತುಗಳು

20(51) ಶ್ರೀ ಖಾದರ್ ಯು ಟಿ(ಮಂಗಳೂರು) ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09 ಹಾಗೂ 2009–10ರ ಸಾಲಿನಲ್ಲಿ ರಾಜ್ಯದ ಸಣ್ಣ ಕೈಗಾರಿಕೆಗಳು ಉತ್ಪಾದನೆ ಮಾಡಿದ ವಸ್ತುಗಳನ್ನು ಸರ್ಕಾರವು ಖರೀದಿಸಿದೆಯೇ; ಹಾಗಿದ್ದಲ್ಲಿ, ಯಾವ ಯಾವ ವಸ್ತುಗಳನ್ನು ಖರೀದಿಸಲಾಗಿದೆ;